ನನ್ನಾಕೆಗೆ ಇದು ಇಷ್ಟವಿರಲಿಲ್ಲ. 'ಮಾತಿನ ವರಸೆಯಲ್ಲಿ ಹಾಗೆ ಹೇಳಿರ್ತಾರೆ. ನೀವು ಅದನ್ಯಾಕೆ ಅಷ್ಟು ಸೀರಿಯಸಾಗಿ ತಗೊಂಡ್ರಿ' ಎಂದು ಕೊಂಕು ತೆಗೆದಳು. 'ಜೋಡಿ ಹಳೆಯದಾದರೆ ಯಾರೂ ಕೇರ್ ಮಾಡಲ್ಲ ಬಾರೆ. ಮಾತು ಹಸಿಯಾದಾಗಲೇ ಹೋಗಿ ಬರೋಣ' ಎಂದು ಹನಿಮೂನ್ ಟೂರನ್ನು ಮದುವೆಗೆ ಬಂದ ನೆಂಟರ ಮನೆಯ ಕಡೆ ಹೂಡಿದೆ. 'ಇನ್ನು ಮೇಲೆ ಯಾವ ಹೊಸ ಜೋಡಿಗೂ ಅಪ್ಪಿತಪ್ಪಿ ಮನೆಗೆ ಬನ್ನಿ ಎಂದು ದಾವತ್ ನೀಡಬಾರದು' ಎಂದು ಎಷ್ಟು ಜನ ಗೊಣಗಿಕೊಂಡರೋ ಗೊತ್ತಿಲ್ಲ. 'ಎಂಥ ಹೊಟ್ಟೆ ಬಾಕ ಪ್ರಾಣಿಯನ್ನ ಕಟ್ಟಿಕೊಂಡೆನಲ್ಲಾ' ಎಂದು ನನ್ನಾಕೆ ಚಡಪಡಿಸಿದ್ದಂತೂ ನಿಜ.

ಮುಗಿಬಿದ್ದು ಹೋದಮೇಲೆ ನನ್ನ ಹಿತೈಷಿಗಳು ಅನಿವಾರ್ಯವಾಗಿ ಮೊಟ್ಟೆಯಿಂದ ಆರಂಭಿಸಿ, ಮೀನು, ಕುರಿ, ಕೋಳಿಗಳ ತನಕ ಗಡದ್ದಾಗಿ ಬೇಯಿಸಿ ಬಡಿಸಿದರು. ಸಿಕ್ಕ ಅವಕಾಶ ಹಾಳಾಗಲು ಬಿಡದೆ ಹೋದ ಕಡೆಯಲ್ಲೆಲ್ಲಾ ಬಾಚಿ ಬಳಿದೆ. ಔಪಚಾರಿಕವಾಗಿ ಕರೆದವರು ಅಗದೀ ಪಶ್ಚಾತ್ತಾಪ ಪಟ್ಟುಕೊಳ್ಳುವಂತೆ ಸರಣಿ ಊಟಗಳನ್ನು ಮುಗಿಸಿ ಹಾಕಿದೆ. ಎಲ್ಲರ ಶಾಪದ ಪರಿಣಾಮ ನನಗಾಗಿ ಕಾಯುತ್ತಿತ್ತು.

ಬಿಟ್ಟಿ ಊಟದ ಕರಾಮತ್ತೇ ಇರಬೇಕು, ಇಲ್ಲದ ಕಾಯಿಲೆಗಳೆಲ್ಲಾ ನಿಧಾನವಾಗಿ ಅಟಕಾಯಿಸಿಕೊಂಡವು. 'ಖಾರದ ಪದಾರ್ಥ ತಿಂದು ಹೀಟು ಜಾಸ್ತಿಯಾಗಿ ಮೂಲವ್ಯಾಧಿ ಬಂದಿದೆ. ಸಣ್ಣ ಆಪರೇಷನ್ ಮಾಡಿ ಸರಿ ಮಾಡ್ತೀನಿ' ಎಂದು ಮಾವನ ಗೆಳೆಯ ಡಾಕ್ಟರೊಬ್ಬರು ತಣ್ಣಗೆ ಹೇಳಿದರು. ಹೊಟ್ಟೆ ಸೇರಿದ ಕೋಳಿ, ಕುರಿ, ಮೀನುಗಳು ಸೇಡು ತೀರಿಸಿಕೊಳ್ಳುವಂತೆ ಒಂದು ಸುಮುಹೂರ್ತದಲ್ಲಿ ಬಿರಾದಾರ್ ಡಾಕ್ಟ್ರು ನನ್ನ ಕೊಯ್ದು ಮಲಗಿಸಿದರು. ನನ್ನ ಈ ಸ್ಥಿತಿ ನೋಡಲು ಬಂದಿದ್ದ ಮಾವನವರು ಒಂದಷ್ಟು ಜೀವನದಲ್ಲಿ ನಾನು ಪಾಲಿಸಲು ಸಾಧ್ಯವಾಗದ ಹಿತೋಪದೇಶಗಳನ್ನು ಹೇಳಿದರು. ಬಂದ ನೆಂಟರಿಗೆ ಏನಾಯಿತು ಎಂದು ಮೌಖಿಕವಾಗಿ ಹೇಳಬಲ್ಲವನಾಗಿದ್ದೆ. ನನ್ನ ಕಾಯಿಲೆಯ ಜಾಗವನ್ನು ಯಾರಿಗೂ ಸುತಾರಾಂ ತೋರಿಸಲು ಸಾಧ್ಯವಿರಲಿಲ್ಲ. ಮೇಲಾಗಿ ಯಾವ ಧೈರ್ಯವಂತನೂ ನೋಡುವ ಆಸಕ್ತಿಯನ್ನೂ ವ್ಯಕ್ತಪಡಿಸಲಿಲ್ಲ.

ಅವತ್ತು ರಾತ್ರಿ ಮಾವ ಮನೆಯಲ್ಲೇ ಉಳಿದಿದ್ದರು. ಮಲಗುವ ಮೊದಲು ಆಪರೇಶನ್ ಆದ ಜಾಗಕ್ಕೆ ಮುಲಾಮು ಹಚ್ಚಬೇಕಿತ್ತು. ಔಷಧಿಯ ಟ್ಯೂಬಿನ ತುದಿ ಚೂಪಾದ ಚಾಕುವಿನಂತಿತ್ತು. ತುಂಬಾ ನಾಜೂಕಿನಿಂದ ನೋವಾಗದಂತೆ ಮುಲಾಮು ಹಚ್ಚಬೇಕಿತ್ತು. ಸಹಾಯಕ್ಕೆ ನನ್ನ ಹೆಂಡತಿಯನ್ನು ಕೂಗಿ ಕರೆದಾಗ ಇದನ್ನೂ ಕೇಳಿಸಿಕೊಂಡ ಮಾವ, 'ಅದೇನು ಬಿಡಿ ಅಳಿಯಂದ್ರೆ ನಾನೇ ಹಚ್ಚುತ್ತೇನೆ' ಎಂದು ಎದ್ದು ಬಂದರು. ಹೆಂಡತಿಗೆ 'ಅವರು ಬೇಡ ಹಳ್ಳಿ ಡಾಕ್ಟ್ರು. ಜೊತೆಗೆ ಬಹಳ ರಫ್ಟು. ನಿಮ್ಮಪ್ಪ ನಿನಗೂ ಡಾಕ್ಟ್ರೇ ಓದಿಸಿರೋದಲ್ವಾ. ನೀನಾದ್ರೆ ಗಂಡ ಅನ್ನೋ ಜೋಪಾನದಲ್ಲಿ ಹಚ್ತೀಯ. ಜೊತೆಗೆ ಇದು ನಿನ್ನ ತಾಳೀ ಭಾಗ್ಯದ ಪ್ರಶ್ನೆ ಕೂಡ, ಯೋಚಿಸಿ ನೋಡು' ಎಂದು ಅಂಗಲಾಚಿದೆ.

ಮಾವ ನಿಷ್ಕರುಣೆಯಿಲ್ಲದೆ ಸೂಜಿ ಚುಚ್ಚುವುದನ್ನು ಕಣ್ಣಾರೆ ಕಂಡಿದ್ದ ನನಗೆ ಹೆದರಿಕೆಯಿತ್ತು. ರೋಗಿಗಳ ಗಾಯಗಳನ್ನು ಬಿ.ಪಿ. ಬ್ಲೇಡಿನಲ್ಲಿ ಚರಚರಚ ಕೊಯ್ದು ಹಾಕಿದ್ದು ನೋಡಿದ್ದ ಹೆದರಿಕೆಯೂ ಜಾಸ್ತಿಯಲ್ಲಿತ್ತು. ಜೊತೆಗೆ ಹೆಣ್ಣುಕೊಟ್ಟ ಮಾವನಿಗೆ ನನ್ನ ಮರ್ಮಸ್ಥಾನದ ದರ್ಶನವನ್ನಾದರೂ ಯಾಕೆ ಮಾಡಿಸಬೇಕು ಎಂಬ ಸದುದ್ದೇಶವೂ ಇತ್ತು. ಆದರೆ ಅವತ್ತು ನನ್ನ ಆಟ ನಡೆಯುವಂತಿರಲಿಲ್ಲ. ವಿಧಿಬರಹ ನಿಗದಿಯಾಗಿತ್ತು.

ಇದೇ ಸೇಡು ತೀರಿಸಿಕೊಳ್ಳುವ ಸುಸಂದರ್ಭವೆಂದು ಮೊದಲೇ ನಿರ್ಧರಿಸಿದಂತಿದ್ದ ಹೆಂಡತಿ